# ಅಂಗೈಯಲ್ಲಿ ಅರಮನೆ

ಭಾಗ-2

(ಹಿಂದಿನ ಸಂಚಿಕೆಯಿಂದ)

ನಗರದಲ್ಲಿ ಅವನು ಒಬ್ಬ ವರ್ತಕನ ಬಳಿ ಕೆಲಸಕ್ಕೆ ಸೇರಿಕೊಂಡ. ಒಂದು ಪುಟ್ಟ ಬಾಡಿಗೆ ಮನೆ ಮಾಡಿದ. ಅವನು ಹಗಲಿನಲ್ಲಿ ವರ್ತಕನ ಅಂಗಡಿಯಲ್ಲಿ ದುಡಿಯುತ್ತಿದ್ದ. ರಾತ್ರಿಯಲ್ಲಿ ಊರಾಚೆಯ ಒಂದು ಬಯಲಿನಲ್ಲಿ ಅರಮನೆಯನ್ನು ದೊಡ್ಡದು ಮಾಡಿ ಅದರ ಸುಪ್ಪತ್ತಿಗೆಯಲ್ಲಿ ಮಲಗಿ ಸುಖಿಸುತ್ತಿದ್ದ. ಬೆಳಿಗ್ಗೆ ಅಲ್ಲಿಂದ ಬೇಗನೆ ಬಂದು ಕೆಲಸಕ್ಕೆ ಹಾಜರಾಗುತ್ತಿದ್ದ. ಮತ್ತೆ ಕೆಲವೊಮ್ಮೆ ಮಧ್ಯಾಹ್ನದ ಹೊತ್ತು ತನ್ನ ಮನೆಗೆ ಬಂದು ಅಲ್ಲಿ ಗೊಂಬೆ ಅರಮನೆಯೊಳಗೆ ತಾನೇ ಪುಟ್ಟ ಗಾತ್ರದಲ್ಲಿ ಪ್ರವೇಶಿಸಿ ಊಟ ಮಾಡಿ ವಿಶ್ರಾಂತಿ ತೆಗೆದುಕೊಂಡು ನಂತರ ಕೆಲಸಕ್ಕೆ ಬರುತ್ತಿದ್ದ. ಹೀಗೆಯೇ ಸ್ವಲ್ಪ ಕಾಲ ಕಳೆಯಿತು. ಈ ರೀತಿ ಗುಟ್ಟಾಗಿ ಸುಖಿಸುವುದು ಅವನಿಗೆ ಬೇಸರವೆನಿಸಿತು. ಈ ರೀತಿ ಇದ್ದರೆ ತಾನು ಶ್ರೀಮಂತನಾಗಿ ಮೆರೆಯುವುದು ಸಾಧ್ಯವಿಲ್ಲ ಎಂದು ಅಣ್ಣನಿಗೆ ಅನಿಸಿತು.

ಅವನು ಈ ರೀತಿ ಯೋಚಿಸುವಾಗ ಅವನಿಗೆ ಹಣ ಮಾಡುವ ಅಡ್ಡದಾರಿಯ ಉಪಾಯವೊಂದು ಹೊಳೆಯಿತು. ಅವನು ಅದನ್ನು ಜಾರಿಗೆ ತರಲು ನಿರ್ಧರಿಸಿದ. ವರ್ತಕನ ಅಂಗಡಿಯಲ್ಲಿ ಒಂದು ತಿಂಗಳು ಕೆಲಸ ಮಾಡಿದ. ತನ್ನ ಸಂಬಳದ ಹಣ ಪಡೆದು ಕೆಲಸವನ್ನು ಬಿಟ್ಟ. ಆ ನಗರವನ್ನು ತೊರೆದು ಮತ್ತೊಂದು ನಗರಕ್ಕೆ ಬಂದ. ಅಲ್ಲಿ ನಗರದ ಮುಖ್ಯ ರಸ್ತೆಯ ಜನ ಸಂದಣಿ ಇರುವ ಚೌಕದಲ್ಲಿ ನಿಂತು ಅರಮನೆಯನ್ನು ತೆಗೆದು ಅಂಗೈಯಲ್ಲಿಟ್ಟುಕೊಂಡ. ಅವನು ಜನರಿಗೆ ಅಂಗೈಯಲ್ಲಿ ಅರಮನೆಯನ್ನು ತೋರಿಸುತ್ತ 'ನಗರದ ಮಹಾ ಜನಗಳೇ! ಇತ್ತ ಈ ಅಂಗೈಯಲ್ಲಿರುವ ಅರಮನೆಯನ್ನು ನೋಡಿ! ಇದರಲ್ಲಿ ನೂರು ಕೋಣೆಗಳಿವೆ. ವಜ್ರ ವೈಢೂರ್ಯ ತುಂಬಿದೆ. ಸುಂದರ ಉದ್ಯಾನವಿದೆ. ರಾಜನ ಒಡ್ಡೋಲಗವಿದೆ. ನೋಡಲು ಎರಡು ಕಣ್ಣುಗಳು ಸಾಲವು. ಇವನ್ನೆಲ್ಲ ನೀವು ಹಣ ಕೊಟ್ಟು ನೋಡಿರಿ! ಅದರ ಸುಖವನ್ನು ಅನುಭವಿಸಿ ಆನಂದಿಸಿರಿ' ಎಂದು ಬಣ್ಣ ಬಣ್ಣವಾಗಿ ವರ್ಣಿಸುತ್ತ ಜನರನ್ನು ಕರೆದ.



ಚಿತ್ರ: ಗಣೇಶ್ ಅರಳಿಕಟ್ಟಿ

ಅನೇಕರು ಅವನ ಮಾತುಗಳನ್ನು ನಂಬದೆ ಹಾಸ್ಯ ಮಾಡಿ ನಕ್ಕು ಮುಂದೆ ಹೋದರು. ಕೆಲವರು ಅವನಿಗೆ ಹಣ ನೀಡಿ ಪುಟ್ಟ ಗಾತ್ರದವರಾಗಿ ಅರಮನೆಯ ಒಳಗೆ ಹೋದರು. ಅಲ್ಲಿನ ದೃಶ್ಯವನ್ನು ಕಂಡು ಬೆರಗಾದರು. ಅವರೆಲ್ಲ ಅದನ್ನೆಲ್ಲ ಮೆಚ್ಚಿಕೊಂಡು ಅಲ್ಲಿಂದ ಹೊರ ಬಂದ ನಂತರ ಅಣ್ಣನಿಗೆ ಮತ್ತಿಷ್ಟು ಹಣ ನೀಡಿ ಸಂತೋಷದಿಂದ ಹೋದರು. ಅವರಿಂದ ಅರಮನೆಯ ಸುದ್ದಿ ನಗರದಲ್ಲಿ ವೇಗದಲ್ಲಿ ಹರಡಿತು. ಜನರೆಲ್ಲ ಅಂಗೈಯಲ್ಲಿ ಅರಮನೆಯನ್ನು ನೋಡಲು ಮುಗಿಬಿದ್ದರು. ಆಗ ಅಣ್ಣನು ಜನರಿಂದ ಹೆಚ್ಚಿಗೆ ಹಣವನ್ನು ವಸೂಲಿ ಮಾಡಿ ಅರಮನೆಯನ್ನು ತೋರಿಸಿದ. ಅವನಿಗೆ ಬಹು ಬೇಗ ಆ ನಗರದಲ್ಲಿ ಭರ್ಜರಿ ಸಂಪಾದನೆಯಾಯಿತು. ಅವನು ಮತ್ತೊಂದು ನಗರಕ್ಕೆ ಹೋದ. ಅಲ್ಲಿಯೂ ಅಂಗೈಯಲ್ಲಿ ಅರಮನೆಯನ್ನು ಜನರಿಗೆ ತೋರಿಸಿ ಭಾರಿ ಹಣ ಸಂಪಾದನೆಯನ್ನು ಮಾಡಿದ.

ಅಣ್ಣನು ಅನೇಕ ನಗರಗಳಲ್ಲಿ ಅಂಗೈಯಲ್ಲಿ ಅರಮನೆಯನ್ನು ಪ್ರದರ್ಶಿಸಿ ಅಪಾರವಾದ ಹಣವನ್ನು ಗಳಿಸಿದ. ಕೊನೆಗೆ ರಾಜ್ಯದ ರಾಜಧಾನಿಗೆ ಬಂದ. ಅಲ್ಲಿ ದೊಡ್ಡದೊಂದು ಬಂಗಲೆಯನ್ನು ಕೊಂಡು ಅದರಲ್ಲಿ ವಾಸ ಮಾಡಲಾರಂಭಿಸಿದ. ಆದರೆ ಅವನ ಹಣದ ದಾಹ ತೀರಲಿಲ್ಲ. ಅವನು ಈಗ ಅರಮನೆಯನ್ನು ರಾತ್ರಿ ಹೊತ್ತಿನಲ್ಲಿ ಶ್ರೀಮಂತರಿಗೆ ಮಾತ್ರ ಪ್ರದರ್ಶಿಸಿ ಅವರಿಂದ ಭಾರಿ ಮೊತ್ತದ ಹಣವನ್ನು ಶುಲ್ಕವಾಗಿ ವಸೂಲು